## ವಾರ್ತಾ ವಿಶ್ಲೇಷಣೆ

**ಬೃಹದ್ ಸಂಸ್ಕೃತ ಶಬ್ದಕೋಶ :** ಪೂನಾದ ಡೆಕ್ಕನ್ ಕಾಲೇಜು ಹೊರತರುತ್ತಿರುವ ಸಂಸ್ಕೃತ ಕೋಶದಲ್ಲಿ ಒಂದು ಕೋಟಿಗೂ ಹೆಚ್ಚು ಸಂಸ್ಕೃತ ಶಬ್ದಗಳು ಇರುತ್ತವೆ. ಋಗ್ವೇದದಿಂದ ಆರಂಭಿಸಿ, ಕ್ರಿ.ಶ. ೧೮೦೦ ರವರೆಗೂ, ಸಂಸ್ಕೃತ ಶಬ್ದ ಸಂಪತ್ತು ಬೆಳೆದುಬಂದಿರುವ ಬಗೆಯನ್ನು ದಾಖಲಿಸಲಿರುವ ಈ ಶಬ್ದಕೋಶದ ಕಾರ್ಯ ಆರಂಭವಾಗಿದ್ದು, ೧೯೪೮ ರಲ್ಲಿ. ಈ ಮಹಾನ್ ಕಾರ್ಯದ ಪ್ರವರ್ತಕರು ಡೆಕ್ಕನ್ ಕಾಲೇಜಿನ ಮೊದಲ ನಿರ್ದೇಶಕರಾಗಿದ್ದ ಶ್ರೀ ಎಸ್. ಎಮ್. ಖತ್ರೆ ಅವರು. ಮೊದಲ ಇಪ್ಪತ್ತಾರು ವರ್ಷಗಳು, ೧,೫೦೦ ಕ್ಕೂ ಹೆಚ್ಚು ಪುರಾತನ ಸಂಸ್ಕೃತ ಗ್ರಂಥಗಳನ್ನು ಅಧ್ಯಯನ ಮಾಡಿ, ಅವುಗಳಲ್ಲಿನ ಪದಭಂಡಾರವನ್ನು ಗುರುತಿಸುವುದರಲ್ಲಿಯೇ ಕಳೆಯಿತು. ೧೯೭೬ ರಿಂದ ಈಚಿಗೆ, ಶಬ್ದಕೋಶದ ಕಾರ್ಯ ಆರಂಭ ವಾಗಿದ್ದು, ಕೇವಲ ಶೇ. ೧೦ ಭಾಗ ಮಾತ್ರ ಮುಗಿದಿದೆ ಎಂದು ಡೆಕ್ಕನ್ ಕಾಲೇಜಿನ ನಿರ್ದೇಶಕರಾದ ಶ್ರೀ ಕೆ. ಪದ್ದಯ್ಯ ಮತ್ತು ವಿಖ್ಯಾತ ಸಂಸ್ಕೃತಜ್ಞರಾದ ಶ್ರೀ ವಿ.ಪಿ. ಭಟ್ಟ ಅವರು ಹೇಳುತ್ತಾರೆ.

ಈ ಶಬ್ದಕೋಶವು ಬರಿಯ ನಿಘಂಟುವಾಗಿರುವುದಿಲ್ಲ. **ಪ್ರತಿಯೊಂದು ಪದದ ವ್ಯುತ್ಪತ್ತಿ, ಪ್ರಾಚೀನ ಗ್ರಂಥಗಳಲ್ಲಿ ಅದರ ಉಲ್ಲೇಖ ಮತ್ತು ಐತಿಹಾಸಿಕ ಬೆಳವಣಿಗೆ** – ಈ ಬಗೆಯ ಹತ್ತು ಹಲವು ಸಮೃದ್ಧ ಮಾಹಿತಿಗಳನ್ನು ಈ ಶಬ್ದಕೋಶವು ಹೊಂದಿರುತ್ತದೆ. ಭಾರತದ ಪ್ರಾಚೀನ ಜ್ಞಾನದ ೬೫ ಶಾಖೆಗಳನ್ನು ಈ ಶಬ್ದಕೋಶ ಒಳಗೊಂಡಿರುತ್ತದೆ. ಅದರಲ್ಲಿ ವಿಜ್ಞಾನ, ಸಂಗೀತ, ಇತಿಹಾಸ, ಧರ್ಮ, ಖಗೋಳ ವಿಜ್ಞಾನ, ವಾಸ್ತು ಶಿಲ್ಪ ಮೊದಲಾದವುಗಳು ಸೇರಿರುತ್ತವೆ.

ಮೊದಲು ಇದನ್ನು ಇಪ್ಪತ್ತು ಸಂಪುಟಗಳಲ್ಲಿ ಪ್ರಕಟಿಸುವ ಯೋಜನೆ ಮಾಡಲಾಗಿತ್ತು. ಆದರೆ ಯೋಜನೆ ವಿಸ್ತಾರಗೊಂಡು, ಐವತ್ತು ಸಂಪುಟಗಳಲ್ಲಿ ಮುಗಿಯಬಲ್ಲುದು ಎಂದು ಈಗ ಅಂದಾಜು ಮಾಡಲಾಗಿದೆ. **'ಮಹತೋ ಮಹೀಯಾನ್'** (ಮಹತ್ತಿಗಿಂತಲೂ ಮಹತ್ತಾದುದು) ಎಂದು ಹೇಳಬಹುದಾದ ಈ ಶಬ್ದಕೋಶದ ಕಾರ್ಯವು ಇನ್ನೂ ಐವತ್ತು ವರ್ಷಗಳ ಕಾಲ ತೆಗೆದುಕೊಳ್ಳಬಹುದು ಎಂದು ಊಹಿಸಲಾಗಿದೆ. ಈ ಶಬ್ದಕೋಶದ ಮಹತ್ವವನ್ನು ಅರಿತ ಕೇಂದ್ರ ಸರ್ಕಾರವು **೫ ಕೋಟಿ** ರೂಪಾಯಿಗಳನ್ನು ಈ ಯೋಜನೆಗೆ ಅನುದಾನವಾಗಿ ನೀಡಿದೆ. ಅದಲ್ಲದೆ, ಕಳೆದ ಕೆಲವು ವರ್ಷಗಳಿಂದ ಇದನ್ನು ಗಣಕೀಕರಣಕ್ಕೆ ಒಳಪಡಿಸಲಾಗುತ್ತಿದೆ.

ಈ ಶಬ್ದಕೋಶದ ಮೊದಲ ಸಂಪುಟವು ೧೯೭೬ ರಲ್ಲಿ ಬಿಡುಗಡೆಯಾಯಿತು. ಪ್ರತಿ ಎರಡು ಅಥವಾ ಮೂರು ವರ್ಷಗಳಿಗೆ ಒಮ್ಮೆ ಸಂಪುಟಗಳ ಒಂದು ಭಾಗವನ್ನಾದರೂ ಪ್ರಕಟಿಸಲಾಗುತ್ತಿದೆ. ಅದರಂತೆ, ಎಂಟನೆಯ ಸಂಪುಟದ ಮೂರನೆಯ ಭಾಗವು ೨೦೦೮ರ ಆಗಸ್ಟ್ ೧೭ ರಂದು ಬಿಡುಗಡೆಯಾಯಿತು. ಭಾರತೀಯ ಇತಿಹಾಸ ಸಂಶೋಧನಾ ಕೇಂದ್ರದ ಅಧ್ಯಕ್ಷರಾದ ಶ್ರೀ ಸವ್ಯಸಾಚಿ ಭಟ್ಟಾಚಾರ್ಯ ಅವರು ಈ ಭಾಗವನ್ನು ಬಿಡುಗಡೆ ಮಾಡಿ, **'ಭಾರತೀಯ ನಾಗರಿಕತೆ'** ಎಂಬ ವಿಷಯವಾಗಿ ಭಾಷಣ ಮಾಡಿದರು.

ಜಗತ್ತಿನಾದ್ಯಂತ ವಿದ್ವಾಂಸರ ಗಮನವನ್ನು ಸೆಳೆದಿರುವ ಈ ಪರಮಾದ್ಭುತ ಯೋಜನೆಯು ಭಾರತೀಯ ಸಂಸ್ಕೃತಿಯ ಕೈಗನ್ನಡಿಯಾಗಲಿದೆ; ಭಾರತೀಯರು ಎಲ್ಲ ಕಾಲಕ್ಕೂ ಹೆಮ್ಮೆ ಪಟ್ಟುಕೊಳ್ಳುವ ಉತ್ಕೃಷ್ಟ ವಾಙ್ಮಯವಾಗಲಿದೆ. ಅದು ಬೇಗನೆ ಸಂಪನ್ನಗೊಳ್ಳಲಿ ಎನ್ನುವುದೇ ನಮ್ಮೆಲ್ಲರ ಬಯಕೆ.

**(ದಿ ಹಿಂದೂ, ಇಂಟರ್ ನೆಟ್ ಆವೃತ್ತಿ, ೨೦೦೮)**

**ಮೃಗಗಳಲ್ಲಿ ಮಾನವೀಯತೆ :** ಮಾನವರಲ್ಲಿಯೇ ಮಾನವೀಯತೆಯ ಅಭಾವ ಕಂಡುಬರುತ್ತಿರುವ ಈ ಕಾಲದಲ್ಲಿ, ಮೃಗಗಳಲ್ಲಿಯೂ ಮಾನವೀಯತೆಯ ಕುರುಹುಗಳನ್ನು ವಿಜ್ಞಾನಿಗಳು ಕಂಡುಹಿಡಿದಿದ್ದಾರಂತೆ! ಮಾನವೀಯತೆಯ ಲಕ್ಷಣಗಳಲ್ಲಿ ಆರು ಬಹು ಮುಖ್ಯವಾದುವು. ಅವೆಂದರೆ ೧. **ಸಂಸ್ಕೃತಿ** ೨. **ಅಂತರ್ ದೃಷ್ಟಿ** ೩. **ಉಪಕರಣಗಳ ಬಳಕೆ** ೪. **ನೈತಿಕತೆ** ೫. **ಭಾವೋದ್ವೇಗ** ಮತ್ತು ೬. **ವ್ಯಕ್ತಿತ್ವ**. ಈ ಆರೂ ಲಕ್ಷಣಗಳು ಪ್ರಾಣಿಗಳಲ್ಲೂ ಸ್ವಲ್ಪವಾದರೂ ಕಂಡು ಬರುತ್ತವೆ ಎನ್ನುತ್ತಾರೆ ಲೇಖಕ ಪ್ರೊ. ಜಿ.ಎಸ್. ರಂಗನಾಥ್ ಅವರು.

ಡಾಲ್ಫಿನ್ ಮತ್ತು ತಿಮಿಂಗಿಲಗಳಲ್ಲಿ **ಸಮೂಹ ಜೀವನ ಸಂಸ್ಕೃತಿ**ಯನ್ನು ನಾವು ಕಾಣಬಹುದು. ಚಿಂಪಾಂಜಿಯ ಮೇಲೆ ನಡೆಸಿದ ಒಂದು ಪ್ರಯೋಗದಲ್ಲಿ, ಅದು ಇತರರ ಮನಸ್ಸನ್ನು ಅರಿತುಕೊಳ್ಳುವ **ಅಂತರ್ ದೃಷ್ಟಿ**ಯನ್ನು ಪ್ರಕಟಪಡಿಸಿತು. ಹಾಗೆಯೇ, ಗೋರಿಲ್ಲಾ ಮತ್ತು ಅಮೆರಿಕದ ನ್ಯೂ ಕ್ಯಾಲಿಡೋನಿಯಾ ಪ್ರದೇಶದ ಕಾಗೆಗಳು ಕೆಲವು ಕಾರ್ಯಗಳಿಗಾಗಿ, **ಸರಳ ಉಪಕರಣಗಳನ್ನು ತಯಾರಿಸಿ**ಕೊಂಡಿರುವುದನ್ನು ಕಾಣುತ್ತೇವೆ. ಅಮೆರಿಕದ ನಾರ್ತ್‌ವೆಸ್ಟ್ ವಿಶ್ವವಿದ್ಯಾನಿಲಯದ ವಿಜ್ಞಾನಿಗಳು ಮಂಗ ಮತ್ತು ಇಲಿಗಳಲ್ಲಿಯೂ **ನೈತಿಕ ಪ್ರಜ್ಞೆ** ಇದೆ ಎನ್ನುವುದನ್ನು ಕಂಡು ಹಿಡಿದಿದ್ದಾರಂತೆ. ಎಮ್ಮೆ, ಜಿಂಕೆ, ನಾಯಿಗಳು ಹಲವೊಮ್ಮೆ ಕುಣಿದು ಕುಪ್ಪಳಿಸುತ್ತವೆ. ಇದರಿಂದ ಅವುಗಳಲ್ಲೂ **ಭಾವೋದ್ವೇಗ**ವಿದೆ ಎಂದು ಕಂಡುಹಿಡಿಯಲಾಗಿದೆ. ಕಡೆಯದಾಗಿ, ಜೇಡರ ಹುಳುಗಳಲ್ಲಿ ಮತ್ತು ಕೆಲವು ಬಗೆಯ ಮೀನುಗಳಲ್ಲಿ **ಸ್ವಂತಿಕೆ ಅಥವಾ ವ್ಯಕ್ತಿತ್ವದ ಪ್ರಜ್ಞೆ** ಇದೆ ಎನ್ನುವುದನ್ನು ಅಮೆರಿಕದ ಟೆನ್ನಸ್ಸೀ ವಿಶ್ವವಿದ್ಯಾನಿಲಯದ ವಿಜ್ಞಾನಿಗಳು ಕಂಡುಹಿಡಿದಿದ್ದಾರೆ.

ಹೀಗಾಗಿ ಮಾನವೀಯತೆ ಎನ್ನುವುದು ಮಾನವರಿಗೆ ಮಾತ್ರವೇ ಸೀಮಿತವಾಗಿಲ್ಲ ಎನ್ನುವುದು ವಿಜ್ಞಾನಿಗಳ ನಿಲುವು. ಆದರೆ ಮಾನವರೇ ತಮ್ಮ ಮಾನವೀಯತೆಯ ಲಕ್ಷಣಗಳನ್ನು ದುರುಪಯೋಗಪಡಿಸಿಕೊಂಡು, ಪರಸ್ಪರ ದ್ವೇಷ, ಹಿಂಸೆ, ದೌರ್ಜನ್ಯಗಳಲ್ಲಿ ತೊಡಗುತ್ತ, ಪ್ರಾಣಿಗಳಿಗಿಂತ ಹೀನಾಯವಾಗಿ ನಡೆದುಕೊಳ್ಳುತ್ತಿರುವುದಕ್ಕೆ ಪರಿಹಾರ ವೇನು? ಇದು ಮಾನವರ ಅಧಃಪತನವನ್ನು ಸೂಚಿಸುತ್ತದೆಯಲ್ಲವೇ?

ಭಗವಂತನು ಸೃಷ್ಟಿಸಿರುವ ಅತ್ಯಂತ ಶ್ರೇಷ್ಠ ಜೀವಿಯಾಗಿರುವ ಮನುಷ್ಯನು ತನ್ನ ಅಸ್ತಿತ್ವದ ಮಹತ್ವವನ್ನು ಮನಗಾಣಬೇಕು. ಪ್ರಾಣಿಗಳಿಗಿಂತ ಉನ್ನತವಾದ ಬಾಳನ್ನು ಬಾಳುವುದಷ್ಟೇ ಅಲ್ಲ, ತನ್ನೊಳಗೆ ಅಂತರ್ಗತವಾಗಿರುವ ದೈವೀ ಪ್ರಜ್ಞೆಯ ವಿಕಸನಕ್ಕಾಗಿ ಪರಿಶ್ರಮಿಸಬೇಕು. ಆಗ ಮಾತ್ರ ಅವನು ಪ್ರಾಣಿಗಳಿಗಿಂತ ಉತ್ತಮನೆನಿಸಿಕೊಳ್ಳಬಲ್ಲನು.

**(ಉತ್ಥಾನ ಮಾಸಪತ್ರಿಕೆ, ಸೆಪ್ಟೆಂಬರ್ ೨೦೦೮)**